ಇ) ಈ ಬಸ್ಸುಗಳನ್ನು ಖರೀದಿಸಲು ತಗಲುವ ಅಂದಾಜು ವೆಚ್ಚವೆಷ್ಟು;

ಈ) ಖರೀದಿಸಿದ ಈ ಹೊಸ ಬಸ್ಸುಗಳಲ್ಲಿ ಎಷ್ಟನ್ನು ಬೀದರ್ ಜಿಲ್ಲೆಗೆ ಕೊಡಲಾಗುವುದು ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

ಅ) 1992–93ನೇ ಸಾಲಿನಲ್ಲಿ ಒಟ್ಟು 1350 ಹೊಸ ಬಸ್ಸಿನ ಅಡಿಗಟ್ಟುಗಳನ್ನು ಖರೀದಿಸಲು ಉದ್ದೇಶಿಸಲಾಗಿದೆ.

ಆ) ಇಲ್ಲ

ಇ) ರೂ. 76.81 ಕೋಟಿಗಳು

ಈ) 1992–93ನೇ ಸಾಲಿನ ಕಾರ್ಯ ಯೋಜನೆ ಪ್ರಕಾರ ಸುಮಾರು 43 ಹೊಸ ಬಸ್ಸುಗಳನ್ನು ಜನವರಿ 1993ರವರೆಗೆ ಕೊಡಬೇಕಾಗಿದ್ದು, 44 ವಾಹನಗಳನ್ನು ಕೊಡಲಾಗಿದೆ.

ಸಚಿವರುಗಳ ಸ್ವಾಧೀನದಲ್ಲಿರುವ ಎಲ್ಲಾ ಮಾದರಿಯ ರಾಜ್ಯ ವಾಹನಗಳ ವಿವರ

240 (723) ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ):-

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1. ಕರ್ನಾಟಕ ಸರ್ಕಾರದ ಸಚಿವರುಗಳ ಉಪಯೋಗಕ್ಕಾಗಿಯೇ ರಾಜ್ಯ ಸರ್ಕಾರದ ಸ್ವಾಧೀನದಲ್ಲಿರುವ ಎಲ್ಲಾ ಮಾದರಿಯ ರಾಜ್ಯ ವಾಹನಗಳ ಸಂಖ್ಯೆ ಎಷ್ಟು;

2. ಇತ್ತೀಚೆಗೆ ಖರೀದಿಸಲಾದ ಹೊಸ ಕಾರುಗಳ ಸಂಖ್ಯೆ ಎಷ್ಟು;

3. ಹೊಸ ಕಾರುಗಳ ಖರೀದಿಗಾಗಿ ಮಾಡಿದ ವೆಚ್ಚವೆಷ್ಟು;

4. ಕೇಂದ್ರ ಸಚಿವರುಗಳು ಸೇರಿದಂತೆ ಇತರ ರಾಜ್ಯಗಳಲ್ಲಿ ಅಧಿಕೃತ ಉಪಯೋಗಕ್ಕಾಗಿ ಅಂಬಾಸಿಡರ್ ವಾಹನಗಳನ್ನು ಮಾತ್ರ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

5. ಹಾಗಿದ್ದಲ್ಲಿ, ಈಗಿರುವ ಕಾರುಗಳನ್ನು ಭಾರತ ಪ್ರವಾಸೋದ್ಯಮ ಅಭಿವೃದ್ಧಿ ಸಂಸ್ಥೆ ಅಥವಾ ಖಾಸಗಿ ಪ್ರವಾಸಿ ಸಂಸ್ಥೆಗಳಿಗೆ ನೀಡುವ ಮೂಲಕ ವಿಲೇವಾರಿ ಮಾಡಿ ಸರ್ಕಾರದ ವೆಚ್ಚವನ್ನು ಉಳಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ;

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

1. ಕಾಂಟೆಸ್ಸಾ ಕಾರುಗಳು	..	33 ***
ಮಾರುತಿ	..	1
ಅಂಬಾಸಿಡರ್	..	1
ಒಟ್ಟು	..	35

*** (ಹಂಚಿಕೆಯಾದ ವಾಹನಗಳು ರಿಪೇರಿಗೆ ಹೋದಾಗ ನೀಡುವ ಬದಲಿ ವಾಹನಗಳೂ ಸೇರಿದಂತೆ)

2. 12 (ಹನ್ನೆರಡು) ಕಾರುಗಳ ಖರೀದಿಗೆ ವ್ಯವಸ್ಥೆ ಮಾಡಲಾಗಿದೆ.

3. ರೂ. 43,14,000-(

4. ಬಂದಿದೆ.

5. ಕಾಂಟೆಸ್ಸಾ ಕ್ಲಾಸಿಕ್ ಕಾರುಗಳು ಪ್ರತಿ ಲೀಟರ್ ಪೆಟ್ರೋಲ್‌ಗೆ ಅಂಬಾಸಿಡರ್ ಕಾರಿಗಿಂತ ಉತ್ತಮ ಮೈಲೇಜ್ ನೀಡುತ್ತಿದ್ದು, ದೂರದ ಪ್ರವಾಸಕ್ಕೆ ಅನುಕೂಲವೆಂದು ಕಂಡುಬಂದಿರುವುದರಿಂದ, ಈ ವಾಹನವನ್ನು ಖರೀದಿಸಲಾಗಿದೆ. ಆದಕಾರಣ, ಈಗಿರುವ ಕಾರುಗಳನ್ನು ವಿಲೇವಾರಿ ಮಾಡುವ ಅವಶ್ಯಕತೆ ಇಲ್ಲವೆಂದು ಸರ್ಕಾರವು ಪರಿಗಣಿಸಿದೆ.

ಬಸವಕಲ್ಯಾಣದಲ್ಲಿ ಟ್ರಾಫಿಕ್ ಪೋಲೀಸ್ ಠಾಣೆ ಪ್ರಾರಂಭ

241 (481) ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವಕಲ್ಯಾಣ):-

ರಾಜ್ಯ ಗೃಹಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬಸವಕಲ್ಯಾಣದಲ್ಲಿ ಜನಸಂಚಾರ ಅಧಿಕವಿದ್ದು ಇದರಿಂದ ಸಂಚಾರಕ್ಕೆ ಅಡ್ಡಿಯಾಗುತ್ತಿರುವ ವಿಚಾರ ಸರ್ಕಾರಕ್ಕೆ ತಿಳಿದಿದೆಯೇ ?

ಆ) ಇಲ್ಲಿ ಸಂಚಾರಿ ಪೋಲೀಸ್ ಠಾಣೆ ಆರಂಭಿಸುವುದಾಗಿ ಹಿಂದಿನ ಸರ್ಕಾರದ ಗೃಹಮಂತ್ರಿಗಳು ವಿಧಾನಸಭಾ ಅಧಿವೇಶನದ ಸಂದರ್ಭದಲ್ಲಿ ಆಶ್ವಾಸನೆ ನೀಡಿದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ಹೊಸದಾಗಿ ಸಂಚಾರಿ ಪೋಲೀಸ್ ಠಾಣೆಯನ್ನು ಆರಂಭಿಸಲಾಗುವುದೇ;

ಈ) ಹಾಗಿದ್ದಲ್ಲಿ ಎಂದಿನಿಂದ ಆರಂಭಿಸಲಾಗುವುದು;

ಉ) ಇಲ್ಲದಿದ್ದರೆ ಅದಕ್ಕೆ ಕಾರಣವೇನು ?

ಶ್ರೀ ರಾಮನಾಥ ರೈ (ರಾಜ್ಯ ಗೃಹಮಂತ್ರಿಗಳು):-

ಅ) ಇಲ್ಲ

ಆ) ಇಲ್ಲ

ಇ) ಉದ್ಭವಿಸುವುದಿಲ್ಲ

ಈ) ಉದ್ಭವಿಸುವುದಿಲ್ಲ

ಉ) ಉದ್ಭವಿಸುವುದಿಲ್ಲ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ವಶಪಡಿಸಿಕೊಂಡ ಜಮೀನುಗಳ ವಿಸ್ತೀರ್ಣ

246 (653) ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್):-

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1989ರಿಂದ ಈವರೆಗೆ ಬೆಂಗಳೂರು ಪ್ರಾಧಿಕಾರದಲ್ಲಿ ನಿವೇಶನಗಳನ್ನು ಕೊಡುವ ಉದ್ದೇಶಕ್ಕಾಗಿ ಸ್ವಾಧೀನಪಡಿಸಿಕೊಂಡ ಜಮೀನು ಎಷ್ಟು;